

# ಸ್ವೀಕಾರ

■ ವಿವೇಕಾನಂದ ಕಾಮತ್

## ಹಣ ದೋಚಿದ ಸೂರ್ಯ

ಹಾಗೆ ಚಿಂತಿಸುತ್ತ ನಿಂತಿದ್ದ ಅಪೂರ್ವಳನ್ನು ಆ ವೈದ್ಯನ ದನಿ ಎಚ್ಚರಿಸಿತ್ತು, 'ನಾನು ಡಾ. ಆದರ್ಶ್..ಇಲ್ಲೇ ಡ್ಯೂಟಿ ಡಾಕ್ಟರ್ ಆಗಿ ಕೆಲ್ಸ ಮಾಡ್ತಿದ್ದೀನಿ.. ಪ್ರಭಾಕರರಾಯರಿಗೆ ಸಂಬಂಧಿಯಾಗ್ಬೇಕು.. ನೀವು..?' ತನ್ನನ್ನು ತಾನು ಪರಿಚಯಿಸಿಕೊಂಡಿದ್ದ.

'ನಾನು ಅಪೂರ್ವ..ಸದ್ಯಕ್ಕೆ ರಾಯರ ಮನೇಲಿ ಮೂರೂವರೆ ವರ್ಷಗಳಿಂದ ಉಳ್ಕೊಂಡಿದ್ದೀನಿ ..ಇಲೆಕ್ಟ್ರಾನಿಕ್ಸ್‌ನಲ್ಲಿ ಬಿ.ಇ. ಮಾಡ್ತಿದ್ದೀನಿ..ಎಸ್. ಎಂ.ಬಿ. ಕಾಲೇಜಿನಲ್ಲಿ..' ಅಪೂರ್ವ ತನ್ನನ್ನು ಅಳೆಯುವಂತಿದ್ದ ಅವನ ನೋಟಕ್ಕೆ ಗಲಿಬಿಲಿಗೊಂಡಳು.

ಎತ್ತರ, ಧೀಮಂತ ನಿಲುವು, ತೀರಾ ಬೆಳ್ಳಗೆ, ಆಕರ್ಷಕವಾಗಿದ್ದ. ತೊಟ್ಟ ಬಿಳಿ ಕೋಟ್, ಕುತ್ತಿಗೆಯಿಂದ ಕೆಳಗೆ ಜೋತು ಬಿದ್ದಿದ್ದ ಸ್ಟೆತಸ್ಕೋಪ್ ಅವನ ವ್ಯಕ್ತಿತ್ವಕ್ಕೆ ಶೋಭೆ ನೀಡಿತ್ತು. ಅವನ ದೀರ್ಘ ನೋಟವೆದುರಿಸಲಾರದೇ ಅಪೂರ್ವಳ ನೋಟ ನೆಲ ಸೋಕಿತ್ತು.

"ವೆರಿ ಗುಡ್..ಅತ್ತೇ ಜೊತೆ ನೀವಿರೋದು